ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್. ಇ ಆರ್ ಟಿ DEPARTMENT OF STATE EDUCATIONAL RESEARCH AND TRAINING
DSERT NO 4, 100 FT RING ROAD, BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422372 26422373 26422374
Fax:26422377

ಸಂಖ್ಯೆ: DPI. DSERT/14/ವಿ.ಕಾ/ Dr A.P.J.A.K./2017-18 ದಿನಾಂಕ :10.07.2017

## ಸುತ್ತೋಲೆ

ವಿಷಯ : National Innovation Foundation ಸಂಸ್ಥೆಯ ವತಿಯಿಂದ ನಡೆಸುವ Dr A.P.J Abdul Kalam IGNITE-18 ಈ ಸ್ಪರ್ಧೆಯಲ್ಲಿ ಶಾಲಾ ಮಕ್ಕಳು ಭಾಗವಹಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಎನ್.ಐ.ಎಫ್ ಇಂಡಿಯಾ ಇವರ ಪತ್ರ ಸಂಖ್ಯೆ:NIF/IGNITE/06/50 Dt:06.06.2018.

*****

National Innovation Foundation (NIF) ಸಂಸ್ಥೆಯು Honey Bee Network CBSE, National/State Educational Boards ಮತ್ತು ಇನ್ನಿತರ ಸಂಸ್ಥೆಗಳ ಸಹಯೋಗದೊಂದಿಗೆ ಶಾಲಾ ವಿದ್ಯಾರ್ಥಿಗಳಲ್ಲಿ ಇರುವ ನಾವೀನ್ಯತೆ ಹಾಗೂ ಸೃಜನಾತ್ಮಕತೆಯನ್ನು ಕಲೆಹಾಕಲು Dr.A.P.J.Abdul Kalam IGNITE-18 ಸ್ಪರ್ಧೆಯನ್ನು ಏರ್ಪಡಿಸಿದೆ.

2017 ರಲ್ಲಿ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅತ್ಯುತ್ಸಾಹಿ 65000 ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಕೆಯಾಗಿದ್ದು, ಈ ಪೈಕಿ 56 ವಿದ್ಯಾರ್ಥಿಗಳ ವಿಚಾರಗಳನ್ನು ಅನೇಕ ಕಠಿಣ ಪರೀಕ್ಷಣಗಳ (rigorous screening) ನಂತರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಈ 56 ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಗ್ರಾಮಭಾರತಿ, ಗಾಂಧೀನಗರ ಗುಜರಾತ್ ಇಲ್ಲಿ ಆಯೋಜಿಸಲಾಗಿದ್ದು, ಗುಜರಾತ್ ರಾಜ್ಯದ ರಾಜ್ಯಪಾಲರಾದ ಶ್ರೀ O.P Kohli ರವರ ಅಧ್ಯಕ್ಷತೆಯಲ್ಲಿ ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿರವರು ಪ್ರಶಸ್ತಿ ಪ್ರಧಾನ ಮಾಡಿರುತ್ತಾರೆ. IGNITE ಪ್ರಶಸ್ತಿಯನ್ನು ಪ್ರತಿ ವರ್ಷ 15ನೇ ಅಕ್ಟೋಬರ್ ರಂದು ಭಾರತ ರತ್ನ ವಿಜೇತ, ಮಾಜಿ ರಾಷ್ಟ್ರಪತಿಗಳಾದ Dr A.P.J Abdul Kalam ಇವರ ಹುಟ್ಟು ಹಬ್ಬದ ದಿನ ಘೋಷಿಸಲಾಗುತ್ತದೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಕುರಿತು ಮಾರ್ಗದರ್ಶನವನ್ನು ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಒದಗಿಸುವುದು.

(ಅ) ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ದಿನಾಂಕ 31.08.2018 ರೊಳಗಾಗಿ ನೇರವಾಗಿ ಈ ಕೆಳಕಂಡ ವಿಳಾಸಕ್ಕೆ ಅಥವಾ ಶಾಲೆಗಳ ಮೂಲಕ ignite@nigindia.org ಈ ವಿಳಾಸಕ್ಕೆ ಇ-ಮೇಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

Dr A.P.J Abdul Kalam IGNITE-18 Competition
National Innovation Foundation – India
Grambharati, Amarpur, Gandhinagar-Muhadi Road,
Gandhinagar, Gujarat -382650.
Tel : 02764261131/32 /38 /39

. . 2

(ಆ) ವಿದ್ಯಾರ್ಥಿಗಳು ಈ ಕೆಳಕಂಡ 4 ವಿಷಯಗಳನ್ನು ಯಾವುದಾದರು ಒಂದನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

1. ದೈನಂದಿನ ಜೀವನದ ಯಾವುದೇ ಸಮಸ್ಯೆಯನ್ನು ಪರಿಹರಿಸಲು ತಾಂತ್ರಿಕ / ಪ್ರಾಯೋಗಿಕ ಚಟುವಟಿಕೆಗಳು.
2. ನೈಜ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನೂತನ ರೀತಿಯಲ್ಲಿ ಬಗೆಹರಿಸುವ ತಾಂತ್ರಿಕ ಯೋಜನೆಗಳು ಅಥವಾ ಕಠಿಣ ಪರಿಶ್ರಮವನ್ನು ಕಡಿಮೆ ಮಾಡುವುದು ಅಥವಾ ದಕ್ಷತೆಯನ್ನು ಹೆಚ್ಚಿಸುವುದು ಅಥವಾ ಸಂಪನ್ಮೂಲಗಳನ್ನು ಸಂರಕ್ಷಿಸುವುದು, ಇವುಗಳ ಬಗ್ಗೆ. (ಈಗಾಗಲೇ ಕಂಡುಹಿಡಿದಿರುವ/ ಬಳಕೆಯಲ್ಲಿರುವ ವೈಜ್ಞಾನಿಕ ವಿಚಾರಗಳ ಬಗೆಗಿನ ನಿರೂಪಣೆಯನ್ನು ಪರಿಗಣಿಸಲಾಗುವುದಿಲ್ಲ.)
3. ವಿದ್ಯಾರ್ಥಿಗಳ ಕುಟುಂಬದವರು ಹಾಗೂ ಸುತ್ತಲಿನ ಹಿರಿಯರಿಂದ ಬಂದ ಸಾಂಪ್ರದಾಯಿಕ ಜ್ಞಾನವನ್ನು ಒಳಗೊಂಡ ಅಭ್ಯಾಸಗಳು.
4. ಸುತ್ತಲಿನ ಪರಿಸರದಲ್ಲಿನ ಇತರೆ ಆವಿಷ್ಕರಣೆ ಮಾಡುವವರ ಕುರಿತು ಮಾಹಿತಿ.

(ಇ) ಪ್ರತಿ ಪ್ರವೇಶವು/ಪ್ರಸ್ತಾವನೆಯು (ಮೇಲಿನ ಆ 1 ಮತ್ತು 2 ಕ್ಕೆ ಸಂಬಂಧಿಸಿದಂತೆ) ವಿದ್ಯಾರ್ಥಿಯು ಸ್ಪರ್ಧಾ ವಿಷಯವನ್ನು ಯಾರೊಬ್ಬರ ಸಹಕಾರವಿಲ್ಲದೆ ಅಥವಾ ನೆರವು ಇಲ್ಲದೇ ತನ್ನ ಸ್ವಂತ ಆಲೋಚನಾ ಶಕ್ತಿಯಿಂದಲೇ ಸಿದ್ಧಪಡಿಸಿರುತ್ತಾನೆ/ಸಿದ್ಧಪಡಿಸಿರುತ್ತಾಳೆ ಎಂದು ಶಿಕ್ಷಕರು ಹಾಗೂ ಪೋಷಕರಿಂದ ದೃಢೀಕರಿಸುವ ಪ್ರಮಾಣ ಪತ್ರದೊಂದಿಗೆ ಸಲ್ಲಿಸಬೇಕು.

(ಉ) ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ರವರ ಜನ್ಮ ದಿನಾಂಕವಾದ 15.10.2018 ರಂದು ಪ್ರಶಸ್ತಿಯನ್ನು ಘೋಷಿಸಲಾಗುವುದು ಮತ್ತು ಈ ದಿನವನ್ನು Children's Creativity and Innovation Day ಎಂದು ಆಚರಿಸಲಾಗುವುದು. ಪ್ರಶಸ್ತಿ ವಿತರಣಾ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು.

(ಊ) IGNITE ಸ್ಪರ್ಧೆಯ ಎಲ್ಲಾ ಅರ್ಹ ಪ್ರಸ್ತಾವನೆಗಳ ಉತ್ಪನ್ನಗಳನ್ನು ಸ್ವಾಮ್ಯವನ್ನು ಕಾಯ್ದುಕೊಳ್ಳಲು (ಪೇಟೆಂಟ್) ಮತ್ತು ನೂತನ ಯೋಜನೆಗಳನ್ನು ಬೆಳೆಸಲು N.I.F ಬೆಂಬಲ ನೀಡುತ್ತದೆ. N.I.F ಹಿಂದಿನ ಕೆಲವು ವರ್ಷಗಳಲ್ಲಿ, ಪ್ರತಿ IGNITE ಪ್ರಶಸ್ತಿ ವಿಜೇತರ ಪೇಟೆಂಟ್‌ಗಳನ್ನು ಕಾಯ್ದುಕೊಳ್ಳಲು ನೆರವು ನೀಡುವುದರೊಂದಿಗೆ ಅನೇಕ ಸಂದರ್ಭಗಳಲ್ಲಿ ಮೊದಲ ಮಾದರಿಯನ್ನು ಉತ್ಪಾದಿಸಲು ಸಹ ಅನುಕೂಲಿಸುತ್ತಾ ಬಂದಿದೆ. ಹಿಂದಿನ IGNITE ಸ್ಪರ್ಧೆಗಳು ಭಾರತದ ರಾಷ್ಟ್ರಪತಿಗಳಿಂದ ಪ್ರಶಸ್ತಿಯನ್ನು ಪಡೆದಿರುತ್ತಾರೆ. ರಾಷ್ಟ್ರೀಯ ಸ್ಪರ್ಧೆಯಲ್ಲಿ ಕೈಗೊಂಡ ಸ್ಪರ್ಧೆಗಳಲ್ಲಿ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ಭಾರತದ ಘನವೆತ್ತ ರಾಷ್ಟ್ರಪತಿಗಳಿಂದ ಉದ್ಘಾಟಿಸಲ್ಪಟ್ಟ N.I.F ಆಯೋಜಿತ ಪ್ರದರ್ಶನಗಳಲ್ಲಿ ಅನೇಕ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ. ಕಳೆದ ಮೂರು ವರ್ಷಗಳಲ್ಲಿ, ರಾಷ್ಟ್ರಪತಿ ಭವನದ ವಿದ್ಯಾರ್ಥಿ-ನಿವಾಸ (Scholar-in-Residence) ಕಾರ್ಯಕ್ರಮಗಳಲ್ಲಿ IGNITE ನ ವಿಜೇತರು ಭಾಗವಹಿಸಿದ್ದು, ಹಲವು ರಾಷ್ಟ್ರೀಯ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಇವರ ಸಂದರ್ಶನವನ್ನು ಮಾಡಿವೆ.

(ಋ) IGNITE ಅವಾರ್ಡ್ ವಿಜೇತರು, ದೆಹಲಿ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿರುವ ಇಂದ್ರಪ್ರಸ್ಥ ಇನ್ಸಿಟ್ಯೂಟ್ ಆಫ್ ಇನ್ಫಾರ್ಮೇಶನ್ ನವದೆಹ ಇಲ್ಲಿ ಪ್ರವೇಶ ಪಡೆಯುವ ಸಂದರ್ಭದಲ್ಲಿ 10 ಬೋನಸ್ ಅಂಕಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಬೋನಸ್ ಅಂಕಗಳನ್ನು JEE (ಮುಖ್ಯ) ಮತ್ತು ವರ್ಗ XII ರ ಪರೀಕ್ಷೆಗಳಲ್ಲಿ ಅಭ್ಯಾರ್ಥಿಯು ಪ್ರವೇಶಕ್ಕೆ ಪಡೆಯುವ 100 ಅಂಕಗಳಿಗೆ ಹೆಚ್ಚುವರಿಯಾಗಿ ನೀಡಲಾಗುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಪೋಷಕರ ಗಮನಕ್ಕೆ ತಂದು ವ್ಯಾಪಕ ಪ್ರಚಾರ ಮಾಡಿ ದೈನಂದಿನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಮಕ್ಕಳಲ್ಲಿನ ಸೃಜನಾತ್ಮಕತೆಯನ್ನು ಸಕ್ರಿಯಗೊಳಿಸಲು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಉತ್ತೇಜಿಸುವುದು.

**IGNITE ಸ್ಪರ್ಧೆಗೆ ವಿವಿಧ ಹಂತಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು:**

1. ಕ್ಲಸ್ಟರ್ ಸಭೆಯಲ್ಲಿ ಹೆಚ್ಚು ಪ್ರಚಾರ ನೀಡಿ ವಿದ್ಯಾರ್ಥಿಗಳು **IGNITE** ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು.
2. ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ನೀಡಲು ಕ್ರಮ ವಹಿಸುವುದು.

. . 3

3. CPI ಮತ್ತು DSERT Website ನಲ್ಲಿ ಲಿಂಕ್‌ಗೆ, ಕ್ರಮವಹಿಸಲಾಗುತ್ತಿದ್ದು ವೆಬ್‌ಸೈಟ್‌ನಲ್ಲಿ ಮಾಹಿತಿ ಲಭ್ಯವಾಗುವುದು.
4. ಕ್ಷೇತ ಶಿಕ್ಷಣಾಧಿಕಾರಿಗಳು ಬಿ.ಆರ್.ಸಿ/ಸಿ.ಆರ್.ಪಿ ಸಭೆ ಆಯೋಜಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತುರ್ತು ಕ್ರಮಕ್ಯಗೊಳ್ಳುವುದು.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು

ಪ್ರತಿಯನ್ನು

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು ರವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರಿಗೆ ತುರ್ತು ಕ್ರಮಕ್ಕಾಗಿ.
4. ಕಛೇರಿ ಪ್ರತಿ.

ಪ್ರತಿಯನ್ನು

1.ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇವರ ಕೃಪಾವಗಾಹನೆಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.



C:\Users\DD ETC\Downloads\APJ Abdul Kalam.docx